## ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ

## ಸಿ ಸಿ ನಂಃ **525/2020**

ಪ್ರಾಸಾ ಃ 1

ಪಾಸಾ ಃ 1

ಸಾಕ್ಷಿಯ ಹೆಸರುಃ ಶೋಭಾ ಎಂ ಜೆ
ತಂದೆ /ಗಂಡನ ಹೆಸರು ಃ ಶ್ರೀನಿವಾಸ
ವಯಸ್ಸು ಃ 31
ಉದ್ಯೋಗ ಃ ಬ್ಯೂಟಿ ಪಾರ್ಲರ್
ವಾಸ ಸ್ಥಳ ಃ ಕೆ ಆರ್ ಪೇಟೆ , ಮಂಡ್ಯ.

ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **13.09.2021**

ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ

ಆರೋಪಿ ನನ್ನ ಗಂಡ ಆಗಿರುತ್ತಾನೆ. ನನ್ನ ಮತ್ತು ಆರೋಪಿಗೆ ದಿಃ 24.09.2004 ರಂದು ಕೆ ಆರ್ ಪೇಟೆಯಲ್ಲಿ ಮದುವೆಯಾಗಿರುತ್ತದೆ. ನಾನು ಆರೋಪಿಯನ್ನು ಪ್ರೀತಿಸಿ ಮದುವೆಯಾಗಿರುತ್ತೇನೆ. ನಮ್ಮ ಮದುವೆಗೆ ನಮ್ಮ ಹಿರಿಯರು ಒಪ್ಪಿರುತ್ತಾರೆ ಮತ್ತು ಅವರ ಒಪ್ಪಿಗೆಯ ಮೇರೆಗೆ ನಮ್ಮ ಮದುವೆಯಾಗಿರುತ್ತದೆ. ನನಗೆ ಚಾಸಾ-2 ರಿಂದ 7 ರವರ ಪರಿಚಯ ಇರುತ್ತದೆ.

ನಾನು ಆರೋಪಿಯೊಂದಿಗೆ ಮದುವೆಯಾದ 4-5 ವರ್ಷಗಳ ಕಾಲ ಅನ್ಯೂನ್ಯವಾಗಿ ಇದ್ದೆವು. ನಂತರ ಆರೋಪಿ ಕುಡಿದುಕೊಂಡು ಬಂದು ನನ್ನ ಜೊತೆ ಪ್ರತಿನಿತ್ಯ ಜಗಳವಾಡುತ್ತಿದ್ದರು. ನನ್ನನ್ನು ಮನೆಯಿಂದ ಹೊರಗೆ ಎಳೆದುಕೊಂಡು ಬಂದು ಹೊಡೆಯುತ್ತಿದ್ದರು. ನನ್ನನ್ನು ಮನೆಯಿಂದ ಹೊರಗೆ ರಾತ್ರಿ ಒತ್ತು ಹಾಕುತ್ತಿದ್ದರು.

ಈ ಸಮಯದಲ್ಲಿ ಸಾಕ್ಷಿ ಕಾಲಾವಕಾಶ ಕೋರಿರುವುದರಿಂದ ಕಾಲಾವಕಾಶ ನೀಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.